# ಪ್ರಶ್ನೆ:

# “ಹೊಸ ಒಡಂಬಡಿಕೆಯ ಸಭೆಗೆ ಯಾಜಕರು ಇದ್ದರೋ?”

## ಉತ್ತರ:

ಬೈಬಲಿನ ಪ್ರಮುಖ ಪ್ರಸ್ತಾಪಗಳಲ್ಲಿ ಒಂದು “ಯಾಜಕತ್ವ” ಎಂದು ಕರೆಯಲ್ಪಡುವಂಥದ್ದಾಗಿದೆ. ಈ ಪ್ರಸ್ತಾಪವು ಹಳೇ ಒಡಂಬಡಿಕೆಯಲ್ಲಿಯೂ ಹೊಸ ಒಡಂಬಡಿಕೆಯಲ್ಲಿಯೂ ಇರುತ್ತದೆ. ಈ ಪ್ರಸ್ತಾಪವನ್ನು ನಿಕಟವಾಗಿ ನೋಡೋಣ.

### ಹಳೇ ಒಡಂಬಡಿಕೆ ವಿರುದ್ಧ ಹೊಸ ಒಡಂಬಡಿಕೆ

ಹಳೇ ಒಡಂಬಡಿಕೆಯಲ್ಲಿ ಯಾಜಕತ್ವವು ಸಾರ್ವತ್ರಿಕವಾದದ್ದಾಗಿರಲಿಲ್ಲ. ಎಲ್ಲಾ ಇಸ್ರಾಯೇಲ್ಯರು ಯಾಜಕರಾಗಿ ಸೇವೆ ಮಾಡಲು ಬಿಡಲ್ಪಟ್ಟಿರಲಿಲ್ಲ. ಆರೋನ, ಅವನ ಗಂಡು ಮಕ್ಕಳು, ಅವನ ಗಂಡು ಮೊಮ್ಮಕ್ಕಳು ಮಾತ್ರವೇ “ತಮ್ಮ ಯಾಜಕತ್ವವನ್ನು ಇಟ್ಟುಕೊಳ್ಳಬೇಕಾಗಿತ್ತು.” ಯಾಜಕನ ಕಾರ್ಯಗಳನ್ನು ಮಾಡಲಿಕ್ಕೆ ಪ್ರಯತ್ನಿಸಿದ ಬೇರೆ ಜನರು “ಮರಣಕ್ಕೆ ಒಪ್ಪಿಸಲ್ಪಟ್ಟರು” (ಅರಣ್ಯಕಾಂಡ 3:10).

ಹಳೇ ಒಡಂಬಡಿಕೆಯ ಈ ಸಂಕುಚಿತೆಯು ಹೊಸ ಒಡಂಬಡಿಕೆಯ ಭಾಗವಾಗಿರಲಿಲ್ಲ. ವ್ಯತಿರಿಕ್ತವಾಗಿ, “ಕ್ರೈಸ್ತ” ಎಂಬ ಹೆಸರನ್ನು ಧರಿಸುವ ಎಲ್ಲರೂ (1 ಪೇತ್ರ 4:16) ಪವಿತ್ರರಾದ, ರಾಜವಂಶಸ್ಥರಾದ ಯಾಜಕರಂತೆ ತಮ್ಮ ಸೃಷ್ಟಿಕರ್ತನಿಂದ ಗೌರವಿಸಲ್ಪಟ್ಟಿದ್ದಾರೆ. ಯೇಸುವಿನ ಮುಖಾಂತರ, ಆತನ ಸಭೆಯ ಸದಸ್ಯರು “ಆತ್ಮಿಕವಾದ” ಅಕ್ಷರಶಃವಲ್ಲದ, ದೇವರಿಗೆ ಮೆಚ್ಚಿಕೆಯಾಗುವ ಯಜ್ಞಗಳನ್ನು ಅರ್ಪಿಸುವರು (1 ಪೇತ್ರ 2:5, 9).

“ನಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ ನಮ್ಮನ್ನು [ಕ್ರೈಸ್ತರನ್ನು] ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನಮಹತ್ವಗಳಿರಲಿ. ಆಮೆನ್” (ಪ್ರಕಟನೆ 1:5, 6) ಎಂದು ಅಪೊಸ್ತಲ ಯೋಹಾನನು ಕ್ರಿಸ್ತನನ್ನು ಕೊಂಡಾಡಿದನು.

ವಧಿಸಲ್ಪಟ್ಟ ಆದರೆ ಉತ್ಥಾನವಾದ ಕುರಿಮರಿಯಾದಾತನು ಎಲ್ಲಾ ದೇಶಗಳ ಜನರನ್ನು ತನ್ನ ರಕ್ತದಿಂದ ಕೊಂಡುಕೊಂಡದ್ದರಿಂದ ಮತ್ತು ಅವರನ್ನು ದೇವರಿಗೆ ಯಾಜಕರನ್ನಾಗಿ ಮಾಡಿದ್ದರಿಂದ (ಪ್ರಕಟನೆ 5:9, 10) ಯೋಹಾನನು ಒಂದು ಸ್ತೋತ್ರ ಗೀತವನ್ನು ದಾಖಲೆ ಮಾಡಿದನು. ಈ ಯಾಜಕರು “ತಮ್ಮ ಜೀವಿತವನ್ನು ಆತನಿಗೆ ಮಾತ್ರವೇ ಸಮರ್ಪಿಸುವರು.”[1] ಹೀಗೆ ಹೊಸ ಒಡಂಬಡಿಕೆಯು ಯಾಜಕ ವರ್ಗವನ್ನು ಉನ್ನತಕ್ಕೆ ಏರಿಸದೇ, ಎಲ್ಲಾ ಕ್ರೈಸ್ತರನ್ನು - ಪುರುಷರನ್ನೂ ಸ್ತ್ರೀಯರನ್ನೂ, ಯುವಕರನ್ನೂ ಪ್ರಾಯಸ್ಥರನ್ನೂ ಯಾಜಕರಂತೆ ನೋಡುತ್ತದೆ.

## ಹೊಸ ಒಡಂಬಡಿಕೆ ವಿರುದ್ಧ ಜನರ ಸಾಂಪ್ರದಾಯಗಳು

ಬೇರೆ ಮಾಡಲ್ಪಟ್ಟ ವೈದಿಕರ ಪರವಾಗಿ ಪ್ರಸಿದ್ಧ ಧರ್ಮಗಳು ಹೊಸ ಒಡಂಬಡಿಕೆಯ ತತ್ವವನ್ನು ತಿರಸ್ಕರಿಸಿವೆ ಎಂದು ಹೇಳಲಾಗಿದೆ. "ಅನಭಿಷಿಕ್ತ" ಕ್ರೈಸ್ತರ ಪಾಪಗಳನ್ನು ಕ್ಷಮಿಸಲಿಕ್ಕೆ ಧಾರ್ಮಿಕ ಯಾಜಕರಿಗೆ ಅಧಿಕಾರವಿದೆ ಎಂದು ಬೋಧಿಲ್ಪಟ್ಟಿದೆ. ಕ್ಷಮಾಪಣೆ ಹೇಳುವ ಅಧಿಕಾರ ("ನಾನು ನಿನ್ನನ್ನು ಕ್ಷಮಿಸುತ್ತೇನೆ") ಎಂಬುದು "ಪುರೋಹಿತ ಧರ್ಮ" ಎಂದು ಒಂದು *ಕಥೋಲಿಕ್ ದೈವಜ್ಞಾನ ಡಿಕ್ಷನರಿ*ಯಿಂದ ವಿವರಿಸಲ್ಪಟ್ಟಿದೆ. ಈ ಅಧಿಕಾರವು ಯೇಸುಕ್ರಿಸ್ತನಿಂದ ಅಪೊಸ್ತಲರಿಗೆ ಮತ್ತು ಅವರ ಉತ್ತರಾಧಿಕಾರಿಗಳಿಗೆ, ಬಿಶಪರಿಗೆ ಮತ್ತು ಪ್ರೀಸ್ತರಿಗೆ ಕೊಡಲ್ಪಟ್ಟಿತು, ಆದರೆ ಎಲ್ಲಾ ನಂಬಿಗಸ್ತರಿಗೆ ಕೊಡಲ್ಪಟ್ಟಿಲ್ಲ ಎಂದೂ ಈ ಡಿಕ್ಷನರಿ ಹೇಳುತ್ತದೆ. ಪ್ರತಿಯೊಬ್ಬ "ಅನಭಿಷಿಕ್ತ" ಅನುಯಾಯಿಯು ಅರಿಕೆ ಮಾಡುವ ಭೂತಿನೊಳಗೆ, ಒಂದು ಆಸನ ಮತ್ತು ಕೇಳುವದಕ್ಕಾಗಿ ಒಂದು ಜಾಳಿಕೆ ಯಿರುವಂಥದ್ದರೊಳಗೆ, ಕನಿಷ್ಠ ಪಕ್ಷ ವರ್ಷಕ್ಕೆ ಒಂದು ಸಲವಾದರೂ ಬರಬೇಕು. (ಇದು ಕೆಲವು ಸಲ "the Easter duty" ಎಂದು ಉಲ್ಲೇಖಿಸಲ್ಪಟ್ಟಿದೆ.) ಒಬ್ಬನು ಇದನ್ನು ಕೈಕೊಳ್ಳದಿದ್ದರೆ ಅವನು ಬಹಿಷ್ಕರಿಸಲ್ಪಡುವನು. ಹೀಗಿದ್ದರೂ; *ಕಥೋಲಿಕ್ ದೈವಜ್ಞಾನ ಶಾಸ್ತ್ರ ಡಿಕ್ಷನರಿ*ಯಲ್ಲಿ ಹೇಳಲ್ಪಟ್ಟಂತೆ, "ಅರಿಕೆಗಳು ಕೌನ್ಸಿಲ್ ಆಫ್ ಟ್ರೆಂಟದ ವರೆಗೆ ಸಭೆಗಳಲ್ಲಿ ಒದಗಿಸಲ್ಪಟ್ಟಿರಲಿಲ್ಲ, ಮತ್ತು ಶನಿವಾರದಂದು ಆರರಿಂದ ಒಂಭತ್ತರವರೆಗೆ ಸಾಯಂಕಾಲ ಅರಿಕೆಗಳನ್ನು ಕೇಳಲು ಅಪೊಸ್ತಲರು ಕುಳಿತುಕೊಳ್ಳುತ್ತಿದ್ದರು ಎಂದು ಯೋಚಿಸುವುದು ಅಸಂಬದ್ಧವಾದದ್ದಾಗಿದೆ."

## ಹಳೇ ಒಡಂಬಡಿಕೆಯ ಸಮಾಂತರತೆಗಳು

ಹಳೇ ಒಡಂಬಡಿಕೆಯ ಯಾಜಕತ್ವವು ಹೊಸ ಒಡಂಬಡಿಕೆಯ ಯಾಜಕತ್ವದಂತೆ ಎಲ್ಲರನ್ನೂ ಒಳಗೊಂಡಿದ್ದಾಗಿ*ರಲಿಲ್ಲ* ಎಂಬುದನ್ನು ಆಗಲೇ ನೋಡಿದ್ದೇವೆ. ಹಾಗಿದ್ದರೂ, ಆರೋನನ ಯಾಜಕೀಯ ಸೇವೆಯಲ್ಲಿಯೂ ಮತ್ತು ಕ್ರೈಸ್ತರ ಯಾಜಕತ್ವದಲ್ಲಿಯೂ ಸಮಾಂತರತೆಗಳು ಇರುತ್ತವೆ. ಅವುಗಳಲ್ಲಿ ಏಳನ್ನು ಯೋಚಿಸೋಣ:

(1) *ತೊಳೆಯುವಿಕೆ.* ಆರೋನನು ಮತ್ತು ಅವನ ಗಂಡು ಮಕ್ಕಳು ಯಾಜಕರಿಗಾಗಿ ಸೇವೆ ಮಾಡಲು ಬಿಡಲ್ಪಡುವ ಮೊದಲು, ಅವರನ್ನು "ದೇವದರ್ಶನ ಗುಡಾರದ ಬಾಗಿಲಿಗೆ" ಕರೆದುಕೊಂಡು ಬಂದರು ಮತ್ತು "ನೀರಿನಿಂದ" ತೊಳೆಯಲ್ಪಟ್ಟರು (ವಿಮೋಚನಕಾಂಡ 29:4; 40:12). ಹಾಗೆಯೇ, ಜನರು ಇಂದು ಕ್ರೈಸ್ತರಾಗುವ ಮೊದಲು ಬಾಪ್ತಿಸ್ಮದ ನೀರಿನಲ್ಲಿ ಅವರ ದೇಹಗಳು "ತೊಳೆಯಲ್ಪಡುವವು" (ಅಪೊಸ್ತಲರ ಕೃತ್ಯಗಳು 22:16; ನೋಡಿರಿ 1 ಕೊರಿಂಥ 6:11; ಎಫೆಸ 5:26; ತೀತ 3:5; ಇಬ್ರಿಯ 10:22).

(2) *ಚಿಮುಕಿಸುವದು.* ಆರೋನ ಮತ್ತು ಅವನ ಗಂಡು ಮಕ್ಕಳು ಯಾಜಕರಾಗಿ ಸೇವೆ ಮಾಡಲು ಬಿಡಲ್ಪಡುವ ಮೊದಲು, ಟಗರಿನ ರಕ್ತವು ಅವರ ಮೇಲೆ ಚಿಮುಕಿಸಲ್ಪಟ್ಟಿತು (ವಿಮೋಚನಕಾಂಡ 29:21). ಹಾಗೆಯೇ, ಇಂದು ಜನರು ಯಾಜಕರಂತೆ ಸೇವೆ ಮಾಡುವ ಮೊದಲು, ಕ್ರಿಸ್ತನ ರಕ್ತವು ಸಾಂಕೇತಿಕವಾಗಿ ಅವರ ಹೃದಯಗಳ ಮೇಲೆ ಚಿಮುಕಿಸಲ್ಪಡುವದು (ಇಬ್ರಿಯ 10:22; 12:24; 1 ಪೇತ್ರ 1:2).

(3) *ಅಭಿಷೇಕಿಸುವುದು.* ಆರೋನ ಮತ್ತು ಅವನ ಗಂಡು ಮಕ್ಕಳು, ಸುಗಂಧ ದ್ರವ್ಯಗಳಿಂದ ಸಿದ್ಧಪಡಿಸಿದ ವಿಶೇಷ "ಪವಿತ್ರ ಅಭಿಷೇಕದ ತೈಲವು" ("ಮಿಶ್ರಣ ಮಾಡಿ ಸುಗಂಧ ದ್ರವ್ಯಗಳನ್ನು ತಯಾರಿಸುವವನಂತೆ") ಅವರ ದೇಹಗಳಿಗೆ ಲೇಪಿಸುವವರೆಗೆ ಹಳೇ ಒಡಂಬಡಿಕೆಯ ಯಾಜಕರಂತೆ ಯೋಗ್ಯವಾಗಿ ಪ್ರತಿಷ್ಠಿಸಲ್ಪಡಲಿಲ್ಲ (ವಿಮೋಚ

ನಕಾಂಡ 30:23-30). ಓಲಿವ್ ತೈಲ ಮತ್ತು ಇತರ ವಸ್ತುಗಳ ಬಗ್ಗೆ (ಲವಂಗ, ಚಕ್ಕೆ ಬಜೆ, ದಾಲ್ಚಿನ್ನಿ) ಮೋಶೆಗೆ ಪ್ರತ್ಯೇಕವಾದ ನಿರ್ದೇಶನವು ಕೊಡಲ್ಪಟ್ಟಿತು.

ಯಾಜಕರ ದೇಹಗಳು ಸುಗಂಧ ಸುವಾಸನೆಯೊಂದಿಗೆ ಇದ್ದವು (ಕೀರ್ತನೆ 133:1, 2). ಪರಿಶುದ್ಧ ಅಭಿಷೇಕದಿಂದ, "ಯಾಜಕತ್ವವು ಅವರಿಗೂ ಅವರ ಸಂತತಿಯವರಿಗೂ ಶಾಶ್ವತವಾಗಿರುವುದು" ಎಂದು ಕರ್ತನು ಹೇಳಿದನು (ವಿಮೋಚನಕಾಂಡ 40:15).

ಸಮಾಂತರತೆಯಾಗಿ, ಕೈಸ್ತರು ತಮ್ಮ ದೇಹಗಳು ಬಾಪ್ತಿಸ್ಮದ ನೀರುಗಳಿಂದ ತೊಳೆಯಲ್ಪಟ್ಟನಂತರ ಮತ್ತು ಅವರ ಹೃದಯಗಳು ಯೇಸುವಿನ ರಕ್ತದಿಂದ ಚಿಮುಕಿಸಲ್ಪಟ್ಟನಂತರ, ಅಭಿಷೇಕವನ್ನೂ ಹೊಂದಿಕೊಳ್ಳುವರು. ದೇವರು ತನಗೆ ವಿಧೇಯರಾಗುವವರಿಗೆ ಕೊಡುವ ಪರಿಶುದ್ಧಾತ್ಮನನ್ನು ಅವರು ಸ್ವೀಕರಿಸಿಕೊಳ್ಳುವರು (ಅಪೊಸ್ತಲರ ಕೃತ್ಯಗಳು 5:32). ಅಭ್ಯರ್ಥಿಯನ್ನು ಅಭಿಷೇಕಿಸುವಾತನು, ಪೌಲನ ಪ್ರಕಾರ, ದೇವರಾಗಿದ್ದಾನೆ. ಆತನು "ನಮ್ಮ ಹೃದಯಗಳಲ್ಲಿ" ಆತ್ಮನ ಮುದ್ರೆ ಹಾಕಿ ಭರವಸೆ ಕೊಡುವನು (2 ಕೊರಿಂಥ 1:22).

(4) *ಉಡಿಗೆ ತೊಡಿಗೆ.* ಆರೋನನಿಗಾಗಿ ಮತ್ತು ಅವನ ಮಕ್ಕಳಿಗಾಗಿ "ಉತ್ತಮವಾದ" ಉಡಿಗೆ ತೊಡಿಗೆಗಳಿಗಾಗಿ ಸ್ಪಷ್ಟವಾಗಿ ಕೇಳಿದ್ದಾನೆ (ವಿಮೋಚನಕಾಂಡ 35:19; 39:1). ಯಾಜಕರು ತಮ್ಮ ಕರ್ತವ್ಯದಲ್ಲಿ "ಅಪರಾಧಿಗಳಾಗಿ ಸತ್ತು ಹೋಗದಂತೆ" ತೊಡೆಯ ವರೆಗೆ ನಡುವಿನಿಂದ ಮುಚ್ಚಲ್ಪಡುವ ಉತ್ತಮ ನಾರು ಬಟ್ಟೆಯ ಪ್ಯಾಂಟುಗಳನ್ನು ಧರಿಸಬೇಕಾಗಿತ್ತು (ವಿಮೋಚನಕಾಂಡ 28:42, 43). "ನಾರಿನಿಂದ ಚೆನ್ನಾಗಿ ನೇಯಲ್ಪಟ್ಟ ಅಂಗಿಗಲೂ" "ಹುರಿನಾರಿನಿಂದಲೂ ನೀಲಿ ಧೂಮ್ರವರ್ಣಗಳುಳ್ಳ ದಾರದಿಂದಲೂ ನೇಕಾರನು ಮಾಡಿದ ಉಡುಪುಗಳು" "ಗೌರವಕ್ಕಾಗಿಯೂ ಸೌಂದರ್ಯಕ್ಕಾಗಿಯೂ" ಅಲಂಕರಿಸಲ್ಪಟ್ಟಿದ್ದವು (ವಿಮೋಚನಕಾಂಡ 39:27-29; 28:40). ಹಾಗೆಯೇ ಸರಿಯಾಗಿ ವಸ್ತ್ರಭೂಷಿತರಾದ ಯಾಜಕರಿಗೆ, ಗೌರವಕ್ಕಾಗಿಯೂ ಸೌಂದರ್ಯಕ್ಕಾಗಿಯೂ ತಲೇ ಕವಚವಿತ್ತು (ವಿಮೋಚನಕಾಂಡ 28:40). ದೇವರ ವಿಶೇಷ ಪ್ರತಿನಿಧಿಯು ತನ್ನ ವಿಶೇಷ ಸುಗಂಧ ದ್ರವ್ಯದಿಂದ ಆಕರ್ಷಿತನಾದದ್ದಲ್ಲದೇ ಅವನ ಉಡಿಗೆಗಳಿಂದಲೂ ಅವನು ಆಕರ್ಷಿತನಾಗಿ ಮಾಡಲ್ಪಟ್ಟಿದ್ದನು. ಈ ಉಡುಪುಗಳು ಶುದ್ಧವಾದ ಮತ್ತು ಪ್ರತಿಷ್ಠಿತವಾದ ಜೀವಿತಗಳುಳ್ಳ ಪುರುಷರಿಂದ ಧರಿಸಲ್ಪಡುವಾಗ, ಪರಿಶುದ್ಧ ಉಡುಗೆಯಿಂದ ದೇವರ ಸೇವೆ ಮಾಡುವಾಗ (2 ಪೂರ್ವಕಾಲವೃತ್ತಾಂತ 20:21; ಕೀರ್ತನೆ 29:2), ಎಲ್ಲವೂ ಕರ್ತನು ಯೋಜಿಸಿದಂತೆಯೇ ಇತ್ತು.

ಕೈಸ್ತರ ಸರಿಯಾದ ಮತ್ತು ಸ್ವೀಕಾರಯೋಗ್ಯವಾದ ಉಡುಗೆಗೆ ಮರ್ಯಾದೆಯು ಇರಬೇಕಾಗುತ್ತದೆ, ಆದರೆ ಸಾಕಷ್ಟು ಉಡುಗೆಗಿಂತ - ಹೆಚ್ಚಾದದ್ದು ಮಹಿಳಾ ಕೈಸ್ತರಾಗಿದ್ದ ನಿರ್ದೇಶನದಲ್ಲಿ ಒಳಗೊಂಡಿತ್ತು: ಅವರ ಉಡುಗೆಯು ಅಲಂಕಾರವಾದದ್ದು ಚೆನ್ನಾಗಿ ಕ್ರಮಪಡಿಸಲ್ಪಟ್ಟದ್ದೂ ಆಗಿರಬೇಕಾಗಿತ್ತು (ಗ್ರೀಕ: **kosmio**; 1 ತಿಮೊಥೆ 2:9). ಕೈಸ್ತ ಮಹಿಳೆಯರು ದೈಹಿಕ, ಬಾಹ್ಯವಾದ ಉಡುಪುಗಳಿಗೆ ಒತ್ತು ಕೊಡುವವರಾಗಿರದೇ, ಆಂತರಿಕ, ಕೆಟ್ಟು ಹೋಗದ ನಯವಾದ ಆತ್ಮನ ಉಡುಪುಗಳ ಮೇಲೆ ಒತ್ತುಕೊಡಬೇಕಾಗಿತ್ತು (1 ಪೇತ್ರ 3:4). ಕೈಸ್ತ ಪುರುಷರಿಗಾಗಿ ಯಾವುದೇ ನಿರ್ದೇಶನಗಳು ಕೊಡಲ್ಪಡಲಿಲ್ಲ, ತಮ್ಮ ಜೊತೆ ಮಹಿಳೆಯರಂತೆ ಹೃದಯದ ಉಡುಗೆಗಳ ಮೇಲೆ ಆಂತರಿಕವಾಗಿ ಕೇಂದ್ರೀಕರಿಸುವಂತೆ - ಬಿಡಲ್ಪಟ್ಟರು. ಅಂಥ ಉಡುಪಿನೊಂದಿಗೆ, ನ್ಯಾಯತೀರ್ವಿಕೆಯ ದಿನದಲ್ಲಿ ಅವರು ನಗ್ನರಾಗಿ ಕಂಡು ಬರುವುದಿಲ್ಲ (ನೋಡಿರಿ 2 ಕೊರಿಂಥ 5:3). ಎಲ್ಲಾ ಕೈಸ್ತರ ಉಳಿಯುವ ವಸ್ತ್ರವು ಅಕ್ಷರಶಃ ಉತ್ತಮವಾದ ಉಡುಗೆಯಾಗಿರುವದಿಲ್ಲ ಆದರೆ ಸಾಂಕೇತಿ

ಕವಾದ, ಹೊಳೆಯುವ ಮತ್ತು ಶುದ್ಧವಾದ ನಾರು ಬಟ್ಟೆಯಾಗಿದೆ ಅಂದರೆ ನೀತಿಯುಳ್ಳ ಕಾರ್ಯಗಳು (ಪ್ರಕಟನೆ 19:8). ಹೊಸ ಒಡಂಬಡಿಕೆಯು ಎಲ್ಲಾ ಕ್ರೈಸ್ತರು ಪ್ರತ್ಯೇಕ ಉಡುಪುಗಳ ಮೇಲೆ ಕೇಂದ್ರೀಕರಿಸಬೇಕೆಂದು ನಿರ್ದೇಶಿಸುತ್ತದೆ:

> ... ಕನಿಕರ ದಯೆ ದೀನಭಾವ ಸಾತ್ವಿಕತ್ವ ಧೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ. ಮತ್ತೊಬ್ಬನ ಮೇಲೆ ತಪ್ಪು ಹೊರಿಸುವದಕ್ಕೆ ಕಾರಣವಿದ್ದರೂ ತಪ್ಪು ಹೊರಿಸದೆ ಒಬ್ಬರಿಗೊಬ್ಬರು ಸೈರಿಸಿಕೊಂಡು ಕ್ಷಮಿಸಿರಿ. ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ. ಇದೆಲ್ಲಾದರ ಮೇಲೆ ಪ್ರೀತಿ ಯನ್ನು ಧರಿಸಿಕೊಳ್ಳಿರಿ; ಅದು ಸಮಸ್ತವನ್ನು ಸಂಪೂರ್ಣ ಮಾಡುವ ಬಂಧವಾಗಿದೆ (ಕೊಲೊಸ್ಸೆ 3:12-14).

(5) *ಮನೋಭಾವನೆ.* ಆರೋನನ ಮನೆತನದ ಯಾಜಕರು ಸರಿಯಾದ ಮನೋಭಾವನೆಯುಳ್ಳವರಾಗಿದ್ದು, ಮೋಶೆಯ ದೈವಿಕ ನಿರ್ದೇಶನಗಳನ್ನು ಅನುಸರಿಸುವದರಲ್ಲಿ ಜಾಗರೂಕತೆಯುಳ್ಳವರಾಗಿದ್ದರು. ಯಾವುದೇ ಯಾಜಕನಿಗೆ ಕರ್ತನು ಆಜ್ಞಾಪಿಸಿದ್ದ ಪರಿಶುದ್ಧ ಸೇವೆಯಲ್ಲಿ ಕೂಡಿಸುವುದು ಇಲ್ಲವೇ ತೆಗೆದುಹಾಕುವುದು ದುರಹಂಕಾರವಾದದ್ದಾಗಿತ್ತು (ಧರ್ಮೋಪದೇಶಕಾಂಡ 4:2; 12:32; ಜ್ಞಾನೋಕ್ತಿ 30:6). ಉದ್ದೇಶರಹಿತ ಪಾಪಗಳಿಗಾಗಿ, ದೇವರ ನಿಯಮವು ಕ್ಷಮಾಪಣೆಯ ಸಾಧನಗಳನ್ನು ಒದಗಿಸಿತು (ಯಾಜಕಕಾಂಡ 5:18; ಅರಣ್ಯಕಾಂಡ 15:27, 28). ಉದ್ದೇಶಪೂರ್ವಕವಾದ ಪಾಪವನ್ನು ಕುರಿತು, ದೇವರು ಹೀಗೆ ಹೇಳಿದನು,

> ಆದರೆ ಸ್ವದೇಶದವನಾಗಲಿ ಅನ್ಯದೇಶದವನಾಗಲಿ ಯಾವನಾದರೂ ಮನಃಪೂರ್ವಕವಾಗಿ ಹಟದಿಂದ ಪಾಪವನ್ನು ಮಾಡಿದರೆ ಅವನು ಯೆಹೋವ ನನ್ನು ದೂಷಿಸಿದವನಾದ್ದರಿಂದ ಕುಲದಿಂದ ತೆಗೆದು ಹಾಕಲ್ಪಡಬೇಕು. ಆ ಮನುಷ್ಯನು ಯೆಹೋವನ ಮಾತನ್ನು ತಾತ್ಸಾರಮಾಡಿ ಆತನ ಆಜ್ಞೆಯನ್ನು ಮೀರಿದ್ದರಿಂದ ತೆಗೆದು ಹಾಕಲ್ಪಡಲೇ ಬೇಕು; ಅವನು ತನ್ನ ಪಾಪದ ಫಲವನ್ನು ಅನುಭವಿಸಲಿ (ಅರಣ್ಯಕಾಂಡ 15:30, 31).

ಆರೋನನ ಇಬ್ಬರು ಮಕ್ಕಳಾದ, ನಾದಾಬ ಮತ್ತು ಅಬೀಹು, ಇಬ್ಬರ ಅವಿಧೇಯ ತೆಯ ಬಗ್ಗೆ ಓದಲು ನಮಗೆ ಆಘಾತವಾಗುತ್ತದೆ. ಈ ಇಬ್ಬರು, ಎಲೆಯಾಜರ ಮತ್ತು ಇತಮಾರ ಇವರಿಗಿಂತ - ಹಿರಿಯರಾದವರು, ವಿಶೇಷ ಗೌರವನ್ನು ಅನುಭವಿಸಿದರು. ಅವರು ತಮ್ಮ ತಂದೆಯೊಂದಿಗೆ ಸಿನಾಯಿ ಪರ್ವತದ ಮೇಲೆ ಮಾರ್ಗದ ಒಂದು ಭಾಗ ನಡೆದು ಹೋದರು ಮತ್ತು ಅವರ ಚಿಕ್ಕಪ್ಪ ಹಾಗೂ ಇಸ್ರಾಯೇಲಿನ ಎಪ್ಪತ್ತು ಜನ ಹಿರಿಯರೊಂದಿಗೆ ಹೋಗಿದ್ದರು. ಅಲ್ಲಿ ಆಶ್ಚರ್ಯಕರವಾದ ಸಂಗತಿಯು ಸಂಭವಿಸಿತು:

> "... ಅವರಿಗೆ ಇಸ್ರಾಯೇಲ್ಯರ ದೇವರ ದರ್ಶನವಾಯಿತು. ಆಕಾಶ ಮಂಡಲದಂತೆ ಅತಿನಿರ್ಮಲವಾದ ಇಂದ್ರನೀಲ ಮಣಿಯ ನೆಲಗಟ್ಟು ಆತನ ಪಾದಪೀಠವಾಗಿತ್ತು. ಆತನು ಇಸ್ರಾಯೇಲ್ಯರ ಆ ಮುಖಂಡರಿಗೆ ಯಾವ ಕೇಡೂ ಮಾಡಲಿಲ್ಲ; ಅವರು ದೇವರ ದರ್ಶನ ಮಾಡಿ ಅನ್ನ ಪಾನಗಳನ್ನು ತೆಗೆದುಕೊಂಡರು" (ವಿಮೋಚನಕಾಂಡ 24:9-11; ನೋಡಿರಿ ಅರಣ್ಯಕಾಂಡ 3:2).

ಈ ಇಬ್ಬರು, ಏಕವಾಗಿ ಹೀಗೆ ಗೌರವಿಸಲ್ಪಟ್ಟವರು, ಅನಂತರದಲ್ಲಿ "ಅನ್ಯ ಬೆಂಕಿಯನ್ನು" ಕರ್ತನಿಗೆ ಸಮರ್ಪಿಸಿದರು (ಯಾಜಕಕಾಂಡ 10:1, 2; KJV; ನೋಡಿರಿ 16:12). ಕರ್ತನು ಈ ಕಾರ್ಯವನ್ನು ಕಡೆಗಣಿಸಲಿಲ್ಲ; ಇಬ್ಬರು ಸೊಕ್ಕಿನ ಯಾಜಕರು ಜೀವಂತವಾಗಿ ಸುಟ್ಟುಹಾಕಲ್ಪಟ್ಟರು. ಅವರು ಇತರರಿಗೆ ಉದಾಹರಣೆಯಾದರು, ತನ್ನ ಯಾಜಕರು ಪರಲೋಕದ ನಿರ್ದೇಶನಗಳೊಳಗೆ ಇರಬೇಕೆಂದು ದೇವರ ಅರ್ಥವಾಗಿತ್ತು.

ದೈವಿಕ ಎಚ್ಚರಿಕೆಯಾಗಿ ಕ್ರೈಸ್ತರ ಮುಂದೆ ನಾದಾಬ ಮತ್ತು ಅಬೀಹು ಅವರ ಉದಾಹರಣೆಯಿತ್ತು (ರೋಮಾಪುರ 15:4). ನಾಯಕತ್ವ ತೆಗೆದುಕೊಳ್ಳುವದಕ್ಕೆ (ಗ್ರೀಕ: **proago**) ಇಲ್ಲವೇ "ಅತಿಯಾಗಿ ಮುಂದೆ ಹೋಗುವದರ" (ಗ್ರೀಕ: **parabaino**), ಕ್ರಿಸ್ತನ ನಿರ್ದೇಶನಗಳನ್ನು ದಾಟಿ ಹೋಗುವದರ ಬಗ್ಗೆ ನಾವು ಎಚ್ಚರಿಸಲ್ಪಟ್ಟಿದ್ದೇವೆ (2 ಯೋಹಾನ 9). ಈಗ ಕ್ರಿಸ್ತನಿಂದ ಪ್ರತಿಯೊಂದೂ ಇಪ್ಪತ್ತೇಳು ಪುಸ್ತಕಗಳಲ್ಲಿ ಇರುವದರಿಂದ, ಭಕ್ತಿಯುಳ್ಳ ಯಾಜಕನು ಧಾರ್ಮಿಕ ವಿಷಯಗಳಲ್ಲಿ "ಬರೆಯಲ್ಪಟ್ಟಿದ್ದನ್ನು ಮೀರಿ" ಹೋಗುವದಿಲ್ಲ (1 ಕೊರಿಂಥ 4:6). ಕ್ರೈಸ್ತನಿಗಾಗಿ ಮಾರ್ಗದರ್ಶಿ ತತ್ವವು ನಿರ್ಬಂಧಿಸಲ್ಪಡದೇ ಇದ್ದ ಯಾವುದನ್ನಾದರೂ ಮಾಡಬೇಕೆಂಬುದು ಅಲ್ಲ, ಆದರೆ ಅಧಿಕೃತವಾಗಿ ಕೊಡದೇ ಇರುವದನ್ನು ಮಾಡದೇ ಇರಬೇಕೆಂಬುದಾಗಿ. ಹೊಸ ಒಡಂಬಡಿಕೆಯಲ್ಲಿ ನಿರ್ಬಂಧಿಸದೇ ಇರವಂಥದ್ದು ಪರಿಶುದ್ಧ ನೀರನ್ನು, ಮೂರ್ತಿಗಳನ್ನು, ಧೂಪವನ್ನು ಯಾಂತ್ರಿಕ ಸಂಗೀತವನ್ನು, ಕ್ಯಾಂಡಲ್‌ಗಳನ್ನು, ರೋಜರಿಗಳನ್ನು, ಮರಿಜೂವಾನವನ್ನು, ನರ್ತನವನ್ನು, ಮತ್ತು ಕರ್ತನ ಭೋಜನದ ಭಾಗವಾಗಿ ಹುರಿದ ಕೋಳಿಮಾಂಸವನ್ನು ಉಪಯೋಗಿಸಲು ಬಿಡುತ್ತದೆ. ಹೊಸ ಒಡಂಬಡಿಕೆಯ ಆರಾಧನೆಯಲ್ಲಿ ಸ್ಪಷ್ಟಪಡಿಸಿದ್ದನ್ನು ಮಾಡುವಂಥದ್ದು ಒಬ್ಬನು ಅಪೊಸ್ತಲಿಕ ಬೋಧನೆಯಲ್ಲಿ, ಅನ್ಯೋನ್ಯತೆಯಲ್ಲಿ, ರೊಟ್ಟಿ ಮುರಿಯುವದರಲ್ಲಿ, ಪ್ರಾರ್ಥನೆಯಲ್ಲಿ ಕೃತಜ್ಞತಾ ಸ್ತೋತ್ರದಲ್ಲಿ ಅನುಸರಿಸುವಂಥದ್ದಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 2:42; ಇಬ್ರಿಯ 13:15). ಹೊಸ ಒಡಂಬಡಿಕೆಯ ಯಾಜಕರಿಗೆ ಯಾಂತ್ರಿಕ ಸಂಗೀತ ಇಲ್ಲವೇ ಧೂಪ ಅಥವಾ ಹುರಿದ ಕೋಳಿಮಾಂಸದ ಬಗ್ಗೆ ವಿರೋಧವಿರಲಿಕ್ಕಿಲ್ಲ, ಆದರೆ ಆರಾಧನೆಯ ಬಗ್ಗೆ ಕರ್ತನು ಹೇಳಿದ್ದಕ್ಕೆ ಕೂಡಿಸಲು ಅವರು ಧೈರ್ಯಗೊಳ್ಳಲಾರರು. ಅವರು ನಾದಾಬ ಮತ್ತು ಅಬೀಹು ಅವರ ಪಾಪವನ್ನು ಪುನಾರಾವರ್ತಿಸಲು ಬಯಸುವದಿಲ್ಲ.

(6) *ಧೂಪ.* ಪರಿಶುದ್ಧ ಸ್ಥಳದಲ್ಲಿ, ಪ್ರಾತಃಕಾಲವೂ ಸಾಯಂಕಾಲವೂ, ಹಳೇ ಒಡಂಬಡಿಕೆಯ ಯಾಜಕರು "ಯೆಹೋವನ ಸನ್ನಿಧಿಯಲ್ಲಿ ನಿತ್ಯವಾದ ಧೂಪ ಸಮರ್ಪಣೆ ಮಾಡಬೇಕಾಗಿತ್ತು" (ವಿಮೋಚನಕಾಂಡ 30:1-9). ಈ ಧೂಪ ದ್ರವ್ಯಗಳು ("ಹಾಲುಮಡ್ಡಿ, ಗುಗ್ಗಲ, ಗಂಧದ ಚಕ್ಕೆ, ರಕ್ತಬೋಳ") - ಶುದ್ಧವಾದವುಗಳೂ ಪರಿಶುದ್ಧವಾದವುಗಳೂ ಆಗಿದ್ದು, ಉಪ್ಪಿನೊಂದಿಗೆ ಕಲಿಸಿ (ಸುಗಂಧ ದ್ರವ್ಯ ತಯಾರಿಸುವವನ ಕೆಲಸ), ಅರೆಯಲ್ಪಟ್ಟು, ಬೆಂಕಿಯಲ್ಲಿ ಹಾಕಲ್ಪಡುವಾಗ ಸುಗಂಧ ವಾಸನೆಯ ಹೊಗೆಯನ್ನು ಎಬ್ಬಿಸುವುದು. ಇದನ್ನು "ನಾನು ನಿಮಗೆ ದರ್ಶನ ಕೊಡುವ ಸ್ಥಳದಲ್ಲಿ ಇರಿಸ ಬೇಕು" ಎಂದು ಕರ್ತನು ಹೇಳಿದನು (ವಿಮೋಚನಕಾಂಡ 30:34-36). "ಅದು ಅತಿಪರಿಶುದ್ಧವಾದದ್ದೆಂದು ನೀವು ತಿಳಿದುಕೊಳ್ಳಬೇಕು" ಆ ಪ್ರತ್ಯೇಕವಾದ ದ್ರವ್ಯಗಳ ಮಿಶ್ರಣವು ಕರ್ತನಿಗೆ ಆರಾಧನೆ ಸಲ್ಲಿಸಲು ಮಾತ್ರವೇ ಉಪಯೋಗಿಸಲ್ಪಡತಕ್ಕದ್ದು. ಸುವಾಸನೆಗೋಸ್ಕರ ಅಂಥದ್ದನ್ನು ಮಾಡಿಕೊಳ್ಳುವವನು "ತನ್ನ ಕುಲದಿಂದ ತೆಗೆದು ಹಾಕಲ್ಪಡಬೇಕು" (ವಿಮೋಚನಕಾಂಡ 30:37, 38).

ಹಳೇ ಒಡಂಬಡಿಕೆಯ ಅಕ್ಷರಶಃ ಧೂಪ ಸುಡುವುದು ಹೊಸ ಒಡಂಬಡಿಕೆಯಿಂದ ಪೂರ್ತಿಯಾಗಿ ತೆಗೆದು ಹಾಕಲ್ಪಟ್ಟಿರುವುದು. ಹಾಗಿದ್ದರೂ, ಕ್ರೈಸ್ತರು ಪ್ರಾತಃಕಾಲ ಮತ್ತು ಸಾಯಾಂಕಾಲ, ತಮ್ಮ ಮಹಾಯಾಜಕನಾದ ಯೇಸುಕ್ರಿಸ್ತನ ಹೆಸರಿನಲ್ಲಿ ದೇವರಿಗೆ ಪ್ರಾರ್ಥನೆಗಳನ್ನು ಅರ್ಪಿಸುವದರಲ್ಲಿ ಸಮಾಂತರತೆಯನ್ನು ನೋಡಬಹುದು (ನೋಡಿರಿ ಪ್ರಕಟನೆ 5:8; 8:3, 4).

(7) *ಯಜ್ಞಾರ್ಪಣೆಗಳು.* ಆರೋನನ ಯಾಜಕತ್ವದ ಮುಖ್ಯ ಕರ್ತವ್ಯವು ಯಜ್ಞಗಳನ್ನು ಅರ್ಪಿಸುವುದು ಆಗಿತ್ತು (ನೋಡಿರಿ ಯಾಜಕಕಾಂಡ 1-7). ಮುರಿದ ಆತ್ಮಗಳು, ಪಶ್ಚಾತ್ತಾಪದ ಹೃದಯಗಳು, ಶುದ್ಧ ಜೀವಿತ ಮತ್ತು ವಿಧೇಯತೆಗಳು ಹೋರಿಗಳೊಂದಿಗೆ ಟಗರುಗಳೊಂದಿಗೆ ಯಜ್ಞವೇದಿಗೆ ಒಯ್ಯಲ್ಪಡದಿದ್ದರೆ, ಅವರ ಯಜ್ಞಗಳು ದೇವರಿಗೆ ತಿರಸಕೃತವಾದವುಗಳಾಗಿರುತ್ತಿದ್ದವು (ಕೀರ್ತನೆ 40:6; 51:16; 1 ಸಮುವೇಲ 15:22; ಯೆಶಾಯ 1:11; ಯೆರಮೀಯ 6:20; 7:22, 23; ಆಮೋಸ 5:22; ಮೀಕ 6:6-8). ಸರಿಯಾದ ಮನೋಭಾವನೆ ಮತ್ತು ಜೀವನ ಶೈಲಿಗಳಿಂದ ಒಡಗೂಡಿ, ದೇವರ ಏರ್ಪಾಟಿನಂತೆ - ಕೈಕೊಳ್ಳುವಲ್ಲಿ, ಪ್ರಾಣಿಯಜ್ಞಗಳಿಂದ ಮೇಲೇರುವ ಹೊಗೆಯ ಸುವಾಸನೆಯುಳ್ಳದ್ದು, ವಿಶ್ವದ ದೇವರಿಗೆ ಮೆಚ್ಚಿಕೆಯಾದದ್ದು ಆಗಿತ್ತು.

ದೇವರು ಪ್ರಾಣಿ ಯಜ್ಞಗಳನ್ನು ಆಜ್ಞಾಪಿಸಿದ್ದರೂ, ಎಲ್ಲಾ ಸಮಯದಲ್ಲಿ ಆತನು "ಹೋತ - ಹೋರಿಗಳ ರಕ್ತದಿಂದ ಪಾಪಗಳನ್ನು ತೆಗೆದು ಹಾಕುವುದು ಅಸಾಧ್ಯ" ಎಂಬುದನ್ನು ತಿಳಿದಿದ್ದನು (ಇಬ್ರಿಯ 10:4). ಹೀಗಿದ್ದರೂ ಅಕ್ಷರಶಃ ಕುರಿಮರಿಗೆ ಹೋಲಿಕೆಯಾಗುವ, ಒಂದು ಮಾನವ ದೇಹವು ಮರಿಯಳ ಹೃದಯದೊಳಗೆ ಸಿದ್ಧಪಡಿಸಲ್ಪಟ್ಟಿತು ಮತ್ತು ಅನಂತರದಲ್ಲಿ ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ಕುರುಮರಿಯಾಗಿದ್ದಾನೆಂದು ಘೋಷಿಸಲ್ಪಟ್ಟನು (ಇಬ್ರಿಯ 10:5; ಯೋಹಾನ 1:29). ಕಾಲವು ಪರಿಪೂರ್ಣವಾದಾಗ, "ಹೋತ ಹೋರಿಗಳ ರಕ್ತದಿಂದ ಅಲ್ಲ, ಆದರೆ ತನ್ನ ಸ್ವಂತ ರಕ್ತದಿಂದ" ಯೇಸುವು "ತನ್ನನ್ನೇ ಯಜ್ಞವಾಗಿ ಅರ್ಪಿಸುವದರಿಂದ ಪಾಪವನ್ನು ತೆಗೆದು ಹಾಕಿದನು" (ಇಬ್ರಿಯ 9:12, 26). ಆತನ ಒಂದೇ ಸಾರಿ ಸಮರ್ಪಿಸಿದ ಯಜ್ಞವು ಪ್ರತಿಯೊಂದು ಯುಗದಲ್ಲಿ ದೇವರಿಗೆ ವಿಧೇಯರಾಗುವ ಎಲ್ಲರಿಗೆ ಸಾಕಾಗುವಷ್ಟಾಗಿತ್ತು (ಇಬ್ರಿಯ 5:9; 9:15).

ಕ್ರೈಸ್ತರಿಂದ ಅರ್ಪಿಸಲ್ಪಡುವ ಯಜ್ಞಗಳಲ್ಲಿ ಹೋತ, ಹೋರಿಗಳು ತೆಗೆದು ಹಾಕಲ್ಪಟ್ಟಿವೆ. ಹೊಸ ಒಡಂಬಡಿಕೆಯ ಪರಿಪೂರ್ಣ ನಿಯಮವು (ಯಾಕೋಬ 1:25), ಕ್ರೈಸ್ತರನ್ನು "ಬಾಹ್ಯವಾದ ಅಲ್ಲ ಆದರೆ 'ಆತ್ಮಿಕ' ಯಜ್ಞಗಳನ್ನು ಅರ್ಪಿಸಲು ಕರೆಯುತ್ತದೆ"[2] (1 ಪೇತ್ರ 2:5). ಸ್ವೀಕಾರ ಯೋಗ್ಯ ಕ್ರೈಸ್ತ ಅರ್ಪಣೆಗಳು ಸ್ತೋತ್ರದ, ಆತನ ನಾಮಕ್ಕೆ ಕೃತಜ್ಞತೆ ಸಲ್ಲಿಸುವ ಯಜ್ಞಗಳನ್ನು ಒಳಗೊಂಡಿರುತ್ತವೆ (ಇಬ್ರಿಯ 13:15). ಕೊರತೆಯಲ್ಲಿರುವವರಿಗೆ ಸಹಾಯ ಮಾಡಲು ಪ್ರೀತಿಯ ಅರ್ಪಣೆಗಳಂತೆ ಕೊಡುವ ಹಣವು ಒಂದು ಯಜ್ಞದಂತೆ - ಹೊಸ ಒಡಂಬಡಿಕೆಯಲ್ಲಿ ಯಾದಿ ಮಾಡಲ್ಪಟ್ಟಿದೆ (ಫಿಲಿಪ್ಪಿ 4:18). ಇದಲ್ಲದೇ, ಒಬ್ಬನ ದೇಹವನ್ನು - ಸತ್ತ ಅರ್ಪಣೆಯಂತೆ ಅಲ್ಲ, ಆದರೆ ಸಜೀವ ಯಜ್ಞವಾಗಿ ಉಪಯೋಗಿಸುವುದು, ಕ್ರೈಸ್ತನ ಯೋಗ್ಯವಾದ ಸೇವೆಯಂತೆ - ದೇವರಿಗೆ ಸ್ವೀಕಾರ ಯೋಗ್ಯವಾಗಿದೆ (ರೋಮಾಪುರ 12:1).

## ಮುಕ್ತಾಯ

ಹೊಸ ಒಡಂಬಡಿಕೆಯ ಕ್ರೈಸ್ತರಿಗೆ ಆತ್ಮನ ಸಂದೇಶವು ಎಷ್ಟು ಸುಂದರವಾದದ್ದಾಗಿದೆ! ಹಳೇ ಒಡಂಬಡಿಕೆಯ ಹಿನ್ನಲೆಯಲ್ಲಿ ಕಟ್ಟಲ್ಪಟ್ಟ, ಪತ್ರಿಕೆಗಳು ಕ್ರೈಸ್ತರನ್ನು

ಹೃದಯದಲ್ಲಿ ಮತ್ತು ಜೀವನದಲ್ಲಿ ಶ್ರೇಷ್ಠ ಸೇವೆಗಾಗಿ ಯಾಜಕರಂತೆ ಉನ್ನತಕ್ಕೇರಿಸುತ್ತವೆ. ಪರಲೋಕದ ಯೋಜನೆಗಳಿಗೆ ಕರ್ತೃವಾದಾತನಿಗೆ, ಯಾವಾಗಲೂ ಮಾನವನ ಒಳ್ಳೆಯದಕ್ಕಾಗಿ ನೇಮಕ ಮಾಡಿದಾತನಿಗೆ, ಮಹಿಮೆಯೂ ಆಧಿಪತ್ಯವೂ ಗೌರವವೂ ಎಂದೆಂದಿಗೂ ಎಂದೆಂದಿಗೂ ಇರಲಿ!

ಟಿಪ್ಪಣಿಗಳು

[1]C. G. Wilke and C. L. Wilibald Grimm, *Greek-English Lexicon of the New Testament,* 12th ed., trans. and rev. Joseph H. Thayer (Grand Rapids, Mich.: Zondervan Publishing House, 1973), 298. (See the entry **"hiereus."**) [2]Ibid. (See the entry **"hierateuma."**)

© 2009 Truth for Today